ಎಂ.ವಿ.ಸಿ - 723/2024
ಪಿ.ಡಬ್ಲ್ಯು - 01

**ದಿನಾಂಕ : 30-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - 2 ನೇ ಎದುರುದಾರರ ಪರ ಎಂ ಆರ್ ವಕೀಲರಿಂದಃ**

ಅಪಘಾತವಾದ ಸಮಯದಲ್ಲಿ ನಾನು ನಮ್ಮ ಮನೆಯಲ್ಲಿ ಇದ್ದೆ . ಅಪಘಾತದ ಕುರಿತು ನನಗೆ ರಾತ್ರಿ 7.45 ರ ಸಮಯದಲ್ಲಿ ನನ್ನ ತಂಗಿ ಕರೆ ಮಾಡಿ ತಿಳಿಸಿರುತಾರೆ. ಅಪಘಾತವನ್ನು ನಾನು ಕಣ್ಣಾರೆ ನೋಡದೇ ಇರುವ ಕಾರಣ ಅಪಘಾತ ಹೇಗೆ ಆಯಿತು ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿ ನೋಡಿದವರು ಇದ್ದಾರೆ ಅವರು ಹೇಳಿರುತಾರೆ ಎಂದು ತಿಳಿಸಿರುತ್ತಾರೆ. ನಾನು ವನನ್ನ ಮುಖ್ಯವಿಚಾರಣೆಯಲಿ ತಿಳಿಸಿರುವ ರೀತಿ ಅಪಘಾತ ಸಂಬವಿಸಿಲ್ಲ ಎಂದರೆ ಸರಿಯಲ್ಲ . ಅಪಘಾತ ನನ್ನ ಮನೆಯವರ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ.

ಅಪಘಾತದಿಂದ ಮೃತಪಟ್ಟವರ ಸಂಪಾದನೆ ತೋರಿಸಲು ಪಾಸ್ ಬುಕ್ ಇರುತ್ತದೆ ಬೇರೆ ದಾಖಲೆ ಇರುವುದಿಲ್ಲ . ಮೆಸ್ಕಾಂ ಜೊತೆ ಮಾಡಿಕೊಂಡ ಕರಾರು ಇರುತ್ತದೆ . ನ್ಯಾಯಲಯಕ್ಕೆ ಅದನ್ನು ಹಾಜರುಪಡಿಸಬಹುದು . ನಾವು ಕಾರನ್ನು ಮೆಸ್ಕಾಂ ಗೆ ಬಾಡಿಗೆ ಆದಾರದ ಮೇಲೆ ಕೊಟ್ಟಿದ್ದೆವು ಸದ್ರಿ ಕಾರು ಟೂರಿಸ್ಟ್ ಕಾರು ಆಗಿರುತ್ತದೆ. ಟೂರಿಸ್ಟ್ ವಾಹನ ಎಂದು ತೋರಿಸಲು ನಾನು ದಾಖಲೆ ಹಾಜರುಪಡಿಸುತ್ತೇನೆ . ಮೃತನಿಗೆ ಟೂರಿಸ್ಟ್ ವಾಹನ ಚಲಾಯಿಸಲು ಲೈಸೆನ್ಸ್ ಇತ್ತು . ನಾನು ಹೇಳುವಂತ ಕಾರು ಟೂರಿಸ್ಟ್ ವಾಹನ ಆಗಿರಲಿಲ್ಲ ಎಂದರೆ ಸರಿಯಲ್ಲ. ಮೃತಪಟ್ಟ ವ್ಯಕ್ತಿಗೆ ಲೈಸೆನ್ಸ್ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ವಾಹನವನ್ನು ಮೆಸ್ಕಾಂಗೆ ಗುತ್ತಿಗೆ ಆದಾರದ ಮೇಲೆ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಮುಖ್ಯವಿಚಾರಣೆಯಲ್ಲಿ ಹೇಳಿರುವ ರೀತಿ ಯಾವುದೇ ಆದಾಯ ನಷ್ಟ ಆಗಿಲ್ಲ ಎಂದರೆ ಸರಿಯಲ್ಲ. ಈಗ ನಾವು ನಮ್ಮ ವಾಹನವನ್ನು ಗುತ್ತಿಗೆಗೆ ಕೊಟ್ಟಿಲ್ಲ .ಸಾಕ್ಷಿ ಮುಂದುವರಿದು ನಮ್ಮ ವಾಹನ Scrap ನಲ್ಲಿ ಹೋಗಿರುತದೆ ಎಂದು ತಿಳಿಸಿರುತ್ತಾರೆ . Scrap ಗೆ ಹೋದ ಬಗ್ಗೆ ದಾಖಲೆಯನ್ನು ಹಾಜರುಪಡಿಸುತ್ತೇನೆ. ನಿಪಿ 12 ನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿದ್ದೇನೆ

ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಪಡಿತರ ಚೀಟಿ ಇರುತ್ತದೆ . ನಮಗೆ ಒಂದು ಗಂಡು ಒಂದು ಹೆಣ್ಣು ಮಗಳು ಇರುತಾರೆ . ನನ್ನ ಮಗ ಒಂದು ಸಣ್ಣ ಕೆಲಸದಲ್ಲಿ ಇರುತ್ತಾನೆ . ಮಗಳಿಗೆ ಮದುವೆ ಆಗಿರುತ್ತದೆ . ನಾನು ಈಗ ಒಬ್ಬಳೇ ಇರುತ್ತೇನೆ . ಆಗಾಗ್ಗೆ ಮಗಳ ಮನೆಗೆ ಹೋಗಿ ಬರುತ್ತೇನೆ . ಈಗ ನಿಮ್ಮ ಖರ್ಚಿಗೆ ನಿಮ್ಮ ಮಗ ಹಣ ಕೊಡುತ್ತಾನೆ ಅಲ್ಲವೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನನ್ನ ಮಗನಿಗೆ ಸಂಭಳ ಕಡಿಮೆ ಸ್ವಲ್ಪ ಮಾತ್ರ ಕೊಡುತಾನೆ . ನಾವು ಮೃತರ ಸಂಪಾದನೆಯ ಮೇಲೆ ಅವಲಂಬಿತರಾಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಮೃತಪಡುವಾಗ 72 ಕ್ಕಿಂತ ಹೆಚ್ಚಿನ ವಯಸ್ಸು ಆಗಿತ್ತು ಎಂದರೆ ಸರಿಯಲ್ಲ. ನನ್ನ ಗಂಡನ ವಯಸ್ಸಯನ್ನು ತೋರಿಸಲು ಯಾವುದೇ ದಾಖಲೆ ಇಲ್ಲ . ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿದ ರೀತಿ ಶವಸಂಸ್ಕಾರಕ್ಕೆ , ಓಡಾಡಕ್ಕೆ ಯಾವುದೇ ಹಣ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಅಪಘಾತ ನನ್ನ ಗಂಡನ ಅಜಾಗರೂಕತೆ ಮತ್ತು ನಿರ್ಲಕ್ಷ್ಯತನದಿಂದ ಆಗಿದ್ದು, 2 ನೇ ಎದುರುದಾರರು ಯಾವುದೇ ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಪರಿಹಾರಕ್ಕಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ ಉಡುಪಿ.